ಬಂದ. ಅವನಿಗೆ ಕಾಫಿಯನ್ನು ಕೊಟ್ಟಳು. 'ರಾತ್ರಿ ಅದೇನೆ ನವಿಲು ನವಿಲು ಅಮ್ತ ಮಾತಾಡ್ತಿದ್ದೆ?' ಎಂದು ಕೇಳಿದ ಪ್ರಸಾದ. ಅದಕ್ಕೆ ಚುಕ್ಕಿ 'ನಾನೆಲ್ಲಿ ಹಂಗೆ ಅಂದೆ?' ಅಂದಳು.

ಸಂಜೆ ಲಕ್ಕಮ್ಮನ ಗಂಡ ತನ್ನ ಪರಿಚಯಸ್ಥರ ತೋಟಕ್ಕೆ ಹೋಗಿ ಕೆಂಪು ಕಣಗಿಲೆ ಹೂವುಗಳನ್ನು ಕಿತ್ತುಕೊಂಡು ಬಂದು ಪೂಜಾರ ಹೆಂಜಾರಪ್ಪನ ಮನೆಗೆ ಹೋಗಿ ಕೊಟ್ಟು ಬಂದ. ಅನಂತರ ಮಗಳು, ಅಳಿಯ ಮತ್ತು ಹೆಂಡತಿ ಲಕ್ಕಮ್ಮಳನ್ನು ಕರೆದುಕೊಂಡು ದೇವಸ್ಥಾನಕ್ಕೆ ಹೋದ. ಅಷ್ಟೊತ್ತಿಗೆ ಪೂಜಾರ ಹೆಂಜಾರಪ್ಪ ಮಾರಿ ದೇವತೆಗೆ ಕೆಂಪು ಕಣಗಿಲೆ ಹೂವುಗಳಿಂದ ಅಲಂಕಾರ ಮಾಡಿದ್ದನು. ಹೂವುಗಳಿಂದ ತುಂಬಿಹೋಗಿದ್ದ ದೇವತೆಯ ವಿಗ್ರಹದ ಬೆಳ್ಳಿಯ ಎರಡು ಕಣ್ಣುಗಳು ಮಾತ್ರ ಹೊಳೆಯುತ್ತಿದ್ದವು. ಪೂಜೆ ಮಾಡಿದ ಅನಂತರ ಇವರು ಗರ್ಭಗುಡಿಯ ಮುಂದೆ ಕುಳಿತರು. ಪೂಜಾರಪ್ಪನಿಗೆ ಇವರ ಪ್ರಶ್ನೆ ಮೊದಲೇ ಗೊತ್ತಿದ್ದುದರಿಂದ ನೇರವಾಗಿಯೇ, 'ಲಟಲಟ ಹೇಳಬೇಕು, ಹಿಂಗೆ ಸುಮ್ಮನೆ ಕುತ್ಕಂಡ್ರೆ ಆಗಲ್ಲ, ಒಂದೊಳ್ಳೆ ಹೂವ ಬಿಸಾಕೀಕಡೆ, ಆ ಮಗ ಎಷ್ಟು ದಿನ ಅಮ್ತ ಕಾಯುತ್ತೆ' ಅಂದ. ಚುಕ್ಕಿಗೆ ನಗು ಬಂದು, ಅದನ್ನು ಹಾಗೆ ತಡಕೊಂಡಳು. ತನ್ನ ಮಗಳ ಭಾವವನ್ನು ಗಮನಸಿದ ಲಕ್ಕಮ್ಮ, 'ಗಂಭೀರವಾಗಿ ಪ್ರಾರ್ಥಿಸಿಕೆಳಮ್ಮಿ, ಅಡ್ಡಬೀಳು ಇನ್ನೊಂದು ಸಲ' ಎಂದು, ತಾನು ಬಿದ್ದಳು. ಅವಳನ್ನು ನೋಡಿ ಎಲ್ಲರು ಬಿದ್ದರು. 'ಅದೆ ಮತ್ತೆ ಸುಮ್ಮ ಕುತ್ಕಂಡ್ರೆ ಆಗಲ್ಲ, ನಿನಗೆ ಏನು ಕಮ್ಮಿ ಮಾಡವ್ರೆ ಅವ್ವ. ನಿನ್ನ ಸೇವೆನೇ ಮಾಡ್ತ ಬಂದೆದರೆ. ಮಂತನ ಬೆಳಿಬೇಕೋ ಬೇಡವೋ, ನೀನು ಹಿಡ್ಕಂಡು ಹಿಂಗೆ ಸುಮ್ಮನೆ ಕುತ್ಕಂಡ್ರೆ ಹೆಂಗೆ, ಬಿಸಾಕು ಬಲಗಡೆಕೆ. ಅಷ್ಟು ಸುಲಭಕ್ಕೆ ಬಿಡಲ್ಲ ನಿನ್ನ' ಎಂದು ಆವಾಜು ಹಾಕುವ ನಿಟ್ಟಿನಲ್ಲಿ ಪುಜಾರ ಹೆಂಜರಪ್ಪ ಕೇಳಿದ. ಮತ್ತೊಂದು ಸಲ ಅಡ್ಡಬಿದ್ದರು. ಇವರು ಅಡ್ಡ ಬಿದ್ದಾಗ ಪೂಜಾರಪ್ಪ ತೀರ್ಥವನ್ನು ಇವರ ಮೇಲೆ ಚಿಮುಕಿಸಿದ. ಇವರು ಎದ್ದು, ಮತ್ತು ಹೆಂಜಾರಪ್ಪ ದೇವರ ಕಡೆ ತಿರುಗುವುಷ್ಟರಲ್ಲಿ ಒಂದು ಹೂವು ಬಿದ್ದಿತ್ತು. 'ಅಗ! ಪ್ರಸಾದ ಅಗೈತೆ' ಎಂದ ಹೆಂಜಾರಪ್ಪ. ಲಕ್ಕಮ್ಮ, 'ಎಲ್ಲೆದು ಪುಜಾರಪ್ಪ ಅದು ಹೂವ. ಯಾವ ಕಡೆ ಬಿದ್ದಿರುವ ಕುರುಹೇ ಇಲ್ಲ' ಅಂದಳು. 'ಬಲಗಡೆದ ಕಣಮ್ಮ ಅಗೋ ಅಮ್ಮನ ಬಲಗಣ್ಣಿನ ಕೆಳಗಿಂದ ಉದುರ್‍ರೈತೆ' ಎಂದ. 'ಅಮೋಯ್ ಅಲ್ಲಿ ಯಾವ ಹೂವುನು ಬಿದ್ದಿರುವಂಗೆ ಕಾಣ್ತ ಇಲ್ಲ' ಎಂದಳು ಚುಕ್ಕಿ ಮೆಲ್ಲಗೆ. 'ಪೂಜಾರಪ್ಪ ಸುಳ್ಳು ಹೇಳಲ್ಲ, ಸುಮ್ಕಿರ್‍ರಿ' ಎಂದು ಚುಕ್ಕಿಯ ಅಪ್ಪ ಗದರುವ ರೀತಿಯಲ್ಲಿ ಪಿಸುಗುಟ್ಟಿದ. ಹೆಂಜಾರಪ್ಪ, 'ಒಳ್ಳೇ ಪ್ರಸಾದನೇ ಆಗೈತೆ' ಎಂದು ಹೇಳಿ, ಬಿದ್ದಿದ್ದ ಆ ಹೂವನ್ನು ಎತ್ತಿ ಚುಕ್ಕಿಗೆ ಕೊಟ್ಟ. ಅದನ್ನು ಅವಳು ಎರಡು ಕೈಯಲ್ಲಿ ಬೊಗಸೆಯೊಡ್ಡಿ ಇಸಕೊಂಡಳು.

ಮರುದಿನ ದೀಪಾವಳಿ ಹಬ್ಬ. ಒಂದು ವಾರದಿಂದಲೇ ಜಾನುವಾರುಗಳನ್ನು ಇಟ್ಟುಕೊಂಡಿರುವವರು ಅವುಗಳನ್ನು ತೊಳೆದು, ಕೊಂಬುಗಳನ್ನು ಉಜ್ಜಿ, ಗೊರಸುಗಳನ್ನು ತೊಳೆದು ಸಿದ್ಧಗೊಳಿಸಿದ್ದರು. ಕೊಂಬು, ಕಳಸ, ಟೇಪು, ಜೂಲು ಮತ್ತು ಹೊಸ ಹಗ್ಗಗಳಿಂದ ಅಲಂಕರಿಸಿ ಹೊಸ ವಧುವರರಂತೆ ತಯಾರಿ ಮಾಡಿದ್ದರು. ಅವುಗಳ ಮೈಯಿ, ಕೊಂಬು ಮತ್ತು ಕಾಲುಗಳಿಗೆ ಚೆಂಡು ಹೂವುಗಳ ಹಾರಗಳನ್ನು ಕಟ್ಟಿದ್ದುದರಿಂದ ಅವು ಆಕರ್ಷಣೀಯವಾಗಿ ಕಾಣುತ್ತಿದ್ದವು. ಅಂದು ಸಂಜೆ ಊರ ಮುಖ್ಯ ರಸ್ತೆಯ ಮೂಲಕ ಹಾಡು, ಕುಣಿತ, ಓಲಗ, ಪಟಾಕಿಗಳ ಸದ್ದುಗಳ ಜೊತೆ ಜಾನುವಾರಗಳ ಮೆರವಣಿಗೆ ಸಾಗಿ, ಸಂಜೆ ಎಂಟರ ಹೊತ್ತಿಗೆ ಬೆಂಕಿಯ ಹೇಡಿನ್ನು ಸುತ್ತುವರೆಸಿ ಮತ್ತೆ ಮನೆಗಳಿಗೆ ಜಾನುವಾರುಗಳನ್ನು ಹಿಡಿದುಕೊಂಡು ತಮ್ಮ ಮನೆಗಳಿಗೆ ಬಂದರು. ಇದಾದ ಮರುದಿನಕ್ಕೆ ಮೂರು ವರ್ಷಕ್ಕೆ ಒಂದು ಸರತಿಯಂತೆ, ಆ ವರ್ಷ ಊರ ಬಾಗಿಲ ಗುಡ್ಡೆಕಲ್ಲಿನ ಬಲಿ ಪೂಜೆಗೆ ಸಿದ್ಧತೆ ನಡೆಯಿತು. ಗುಡ್ಡೆಕಲ್ಲಿನ ಪೂಜೆಯಾದ ಬಳಿಕ ಊರ ಮಾರಿ ದೇವತೆಯ ಗ್ರಾಮದ ಭಕ್ತಾದಿಗಳು ತಂದಿದ್ದ ಮರಿಯನ್ನು ಅದಕ್ಕೆ ಬಲಿ ಕೊಡಬೇಕಾಗಿದ್ದುದರಿಂದ ಈ ಕಾರ್ಯವನ್ನು ಲಕ್ಕಮ್ಮನ ಗಂಡನ ವಂಶಸ್ಥರು ನೆರವೇರಿಸಿಕೊಡಬೇಕಾಗಿತ್ತು. ಈಗ ಲಕ್ಕಮ್ಮನ ಗಂಡನೇ ವಂಶದ